

# ಎದೆಯ ಹಾಡಿಗೆ ದನಿಯಾದರೆ ಸಾಕು...

■ ಸಂತೆಬೆನ್ನೂರು ಫೈಜ್ನಟ್ರಾಜ್

ಮನುಷ್ಯ ಅವರಿವರನ್ನು ಮತ್ತು ಅವರ ಬದುಕನ್ನು ನೋಡಿಯೇ ಅರ್ಥ ಆಯಸ್ಸನ್ನು ಕಳೆಯುತ್ತಾನೆ. ತನ್ನೊಳಗೆ ಇಣುಕಿ ನೋಡಿಕೊಳ್ಳುವ ಸಣ್ಣ ಯತ್ನವೂ ಮಾಡಲಾರ. ತನ್ನಂಗಳದ ನೂರು ಗುಲಾಬಿಯೆಡೆ ದೃಷ್ಟಿಸದೇ ನೆರೆಮನೆಯ ದಾಸವಾಳಕ್ಕೆ ಕರುಬುತ್ತಾ ಕೊರಗಿ ಹಾಳಾಗುತ್ತಾನೆ.

ಹೊಟ್ಟೆಯೊಂದರ ರಗಳೆ ಸಾಲದೆಂದೇನೋ ವಿಧಿ।
ಹೊಟ್ಟೆಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್॥
ಹೊಟ್ಟೆ ತುಂಬಿದ ತೋಳ ಮಲಗೀತು; ನೀಂ ಪೆರರ।
ದಿಟ್ಟಿಸುತ ಕರುಬುವೆಯೋ – ಮಂಕುತಿಮ್ಮ

ಪ್ರಾಣಿ ಪಶುಪಕ್ಷಿಗಳೆಲ್ಲವೂ ಹೊಟ್ಟೆ ತುಂಬಿದ ಬಳಿಕ ಪರರ ಗೊಡವೆಗೆ ಹೋಗದೇ ತಮ್ಮ ಪಾಡಿಗೆ ತಾವು ಬದುಕುತ್ತವೆ. ಮನುಜ ತಾ ಉಂಡುಟ್ಟು ಸುಖದ ಸುಪ್ಪತ್ತಿಗೆಯಲ್ಲಿದ್ದರೂ ಅನ್ಯರೆಡೆ ವಕ್ರದೃಷ್ಟಿ ಬೀರದಿರಲಾರ!

ಸಾಧನೆಯ ಹಾದಿಗೆ ನೂರು ಮುಳ್ಳು ಬಿದ್ದರೇನು ಸರಿಸಿ ಸಾಗುವವ ಜಾಣ. ಪೊರಕೆ ಹಿಡಿದು ಇಡೀ ಮುಳ್ಳ ರಾಶಿ ಗುಡಿಸುವವ ದಡ್ಡ, ಕೊಳವೆಂದರೆ ನೀರೂ ಉಂಟು ಕೆಸರೂ ಉಂಟು: ಜೊತೆಯಲ್ಲಿ ಕಮಲವೂ!

ಮನದ ಕೆರೆಯಲ್ಲಿ/ ನಗೆಯಕಮಲವರಳಿದರೆ
ಹೂವಷ್ಟೇ ಲೆಕ್ಕ/ ಒಳಗಿನ ಕೆಸರಲ್ಲ

ಎಂದ ಕವಿಯೊಬ್ಬನ ಮಾತು ಎಷ್ಟು ಅರ್ಥಪೂರ್ಣ! ಇದೇ ಅರ್ಥ ಸ್ಫುರಿಸುವ ಜಿ.ಎಸ್. ಶಿವರುದ್ರಪ್ಪನವರ ‘ಒಳಗಿನ ತಿಳಿಯನು ಕಲಕದೆ ಇದ್ದರೆ ಅಮೃತದಾ ಸವಿಯಿದೆ ನಾಲಗೆಗೆ’ ಎಂಬ ಈ ಕಾವ್ಯಸಾಲು ಸಾಧನೆಗೆ ಸುಮ್ಮನಿದ್ದು ಸಾಗಬೇಕೆಂದೇ ಸೂಚಿಸುತ್ತದೆ.

‘ಈಸಬೇಕು ಇದ್ದು ಜೈಸಬೇಕು’ ಎಂಬ ದಾಸವಾಣಿ ಬಂದ ದುಗುಡ ನುಂಗಿ ನಡೆ ಎಂದು ಹೇಳುತ್ತಲೇ ‘ಬಂದದ್ದೆಲ್ಲಾ ಬರಲಿ, ಗುರುಗೋವಿಂದನ ದಯೆಯೊಂದಿರಲಿ’ ಎಂಬ ಸಾಂತ್ವನ ಕೂಡ ನೀಡುತ್ತದೆ.

ಮನಸಿನ ಮಾತಿಗೆ ಕಿವಿಗೊಡದ ನಾವು ಹಿತ್ತಾಳೆ ಕಿವಿಯಾಗುವಲ್ಲಿ ಸದಾ ಮುಂದು. ಮನೆ ಮಗುವಿನ ಸುಂದರ ಕಲಾಕೃತಿಗೆ ಕಣ್ ಕೊಡದೇ ಎದುರು ಮನೆಯ ಬಾಲಕಿಯ ಗೀರುಗೀರಿನ ಅಂಕುಡೊಂಕಿನ ರೇಖಾಚಿತ್ರವ ಹೊಗಳುವ ನಮ್ಮ ಮನಕೆ ಏನೆನ್ನಬೇಕು?

ಜೀವರಾಶಿಯಲ್ಲಿ ಮಾನವರಿಗೆ ಆದ್ಯತೆ
ನಾವೆ ಮೂಢರಾದರೆ ಜ್ಞಾನಕೆಲ್ಲಿ ಪೂಜ್ಯತೆ...
ಇಲ್ಲಿ ಈಸಬೇಕು, ಇದ್ದು ಜೈಸಬೇಕು
ನಾಗರಿಕರಾದ ಮೇಲೆ ಸುಗುಣರಾಗಬೇಕು...

ಅನ್ನುವ ಅಣ್ಣಾವ್ರ ಹಾಡಾದರೂ ಇದನ್ನೇ ಸ್ಪಷ್ಟೀಕರಿಸುತ್ತದೆ. ಮಾನವರಾದ ಮೇಲೆ ಇತರೆ ಜೀವಿಗಳಿಗಿಂತ ಭಿನ್ನ ಅಂತಲೇ ಲೆಕ್ಕ. ಅದನ್ನು ಅರ್ಥ ಮಾಡಿಕೊಳ್ಳಲು ಮತ್ತೆಷ್ಟು ಜನುಮ ಬೇಕು? ಮನಸಿನ ಮಾತಿಗೆ ಕಿವಿಗೊಡುವ ಸಹೃದಯ ಮಾತ್ರ ಪರಿಸರದ ಹೂವಾಗಿರಬಲ್ಲ!

ನಾನಾ ಎಂಬುದು ನಾನಲ್ಲ
ಈ ಮಾನಷ ಜನ್ಮವು ನನದಲ್ಲ

ಎಂಬ ಶರೀಫರ ತತ್ವಪದ ಸದಾ ನಮ್ಮೊಳಗೆ ಗುನುಗುನಿಸುತ್ತಿರಬೇಕು. ಏನಿದ್ದರೂ ನಮ್ಮದಲ್ಲ, ನಾವಿಲ್ಲಿ ನಿಮಿತ್ತ ಮಾತ್ರ. ಸಾಧಿಸಿದ ಸೇವೆಯಿಂದ ನಾವು ಸತ್ತರೂ ನಮ್ಮ ಹೆಸರು ಉಳಿಯಬೇಕೇ ಹೊರತು ನಮ್ಮ ಹಣ, ಆಸ್ತಿ, ಅಂತಸ್ತು, ಪದವಿ ಪ್ರಶಸ್ತಿಗಳಲ್ಲ.

ಪುಟ್ಟ ಬೀಜವೊಂದು ಮಣ್ಣಿನ ಸಖ್ಯ ಮಾಡಿದರೆ ಮಣ್ಣ ಸ್ನೇಹದೊಂದಿಗೆ ಸಿಕ್ಕ ನೀರು ಬಳಸಿಕೊಂಡು ಕತ್ತಲ ಗರ್ಭದಲ್ಲಿ ಹಂತ ಹಂತವಾಗಿ ಟಿಸಿಲೊಡೆಯುತ್ತಲ್ಲ... ಹಾಗೆ ನಾವು ಕತ್ತಲಲ್ಲಿದ್ದರೂ ಬೆಳೆಯುವ ಹಾದಿ ಹುಡುಕಿಕೊಂಡಾಗ ಸಾಧನೆ ಸಿದ್ಧಿಸುತ್ತದೆ.

ನಿರಾಶೆ, ವಿಫಲತೆ, ಸೋಲು, ಜುಗುಪ್ಸೆ, ಬಡತನ ಇವ್ಯಾವೂ ನಮ್ಮ ಸೋಲಲ್ಲ; ವ್ಯವಸ್ಥೆಯ ಅಥವಾ ಪರಿಸ್ಥಿತಿಯ ಸೋಲಷ್ಟೆ. ಅವುಗಳನ್ನು ಮೀರಿ ನಿಂತಾಗ, ಬಂದುದ್ದನ್ನು ಎದುರಿಸಿ ನಡೆದಾಗ ಜಯ ನಮ್ಮ ನೆರಳಾಗುತ್ತದೆ. ಅದು ಬಿಟ್ಟು ‘ಅಯ್ಯೋ ಹೀಗಾಯಿತಾ’ ಅಂತ ಹಗ್ಗ ಹುಡುಕಿ, ಫ್ಯಾನ್ ತಡಕಿ, ರೈಲು ಹಳಿಗಳ ಅರಸುತ್ತಾ, ಕಾಲುವೆಗಳ ಅನ್ವೇಷಣೆಯಲ್ಲಿ ತೊಡಗಿದರೆ ಅಂತ್ಯ ನಮ್ಮದಾಗುತ್ತದೆಯೇ ಹೊರತು ಸೋಲಿನದಲ್ಲ!

‘ತಮಗಾಗಿ ಮಾತ್ರ ಬದುಕಿರುವವರು ಇದ್ದೂ ಸತ್ತಂತೆಯೇ’ ಎಂದ ವಿವೇಕಾನಂದರ ನುಡಿ ಅಪ್ಪಟ ಸತ್ಯ. ಇನ್ನೊಬ್ಬರಿಗಾಗಿ ಬಾಳುವುದೇ ನಿಜದ ಬಾಳುವೆ... ಆದರೆ ಇಂಥ ಬದುಕು ಬದುಕಲಿಕ್ಕೆ ತುಂಬಾ ಧೈರ್ಯ ಬೇಕು. ಬದುಕು ಬೋರು ಎನ್ನುವವರು, ಟೈಂ ಪಾಸ್ ಮಾಡುವವರು ಕಾಪಿ ಪರೀಕ್ಷೆ, ಸ್ವಂತ ಪರೀಕ್ಷೆ ಸ್ವಪರೀಕ್ಷೆ ಮಾಡಿಕೊಳ್ಳುವುದು ಲೇಸು!

ಮನಸ್ಸು ಮೇಣ, ಬೇಕಾದಂತೆ ಬಾಗಿಸಿಕೊಳ್ಳುವ ಗುಣ ನಮ್ಮದಾದಾಗ ಬೆಳಕಿನ ಬತ್ತಿ ಸದಾ ಬೆಳಗಲು ಸಾಧ್ಯ. ಎದೆಯ ಹಾಡೊಂದು ಸದಾ ನಮ್ಮೊಳಗಿರುತ್ತದೆ. ಅದನ್ನು ಆಲಿಸುವ, ಗುನುಗುನಿಸುವ ವ್ಯವಧಾನ ನಮಗಿಲ್ಲದಿದ್ದರೆ ಮನಸಿನ ಉಲ್ಲಾಸ ಮರೀಚಿಕೆಯಾಗುವುದು ದಿಟ. ಹಾಗಾಗದಂತೆ ಲವಲವಿಕೆ ಕಾಯ್ದುಕೊಳ್ಳೋಣವೇ? ■